KARNATAK UNIVERSITY, DHARWAD
ACADEMIC (S&T) SECTION

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited 'A' Grade 2014

website: kud.ac.in

No. KU/Aca(S&T)/SSL-478/2025-26/1760 ಸುತ್ತೋಲೆ Date: 26 SEP 2025

ವಿಷಯ: ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳಲ್ಲಿ ಯುವ ರೆಡ್ ಕ್ರಾಸ್ ಘಟಕಗಳನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ:೧. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, (ಸಾಮಾನ್ಯ-೨) ಇವರ ಸರ್ಕಾರಿ ಅದೇಶ ಸಂಖ್ಯೆ. ಇಡಿ ೩೮ ವಿವಿಧ ೨೦೧೬,ಬೆಂಗಳೂರು, ದಿ: ೧೭.೦೬.೨೦೧೬

೨. ಸಹಾಯಕ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂ. YRC / SMF / 576-605 / 2025-26, ದಿನಾಂಕ: 28.05.2025.

೩. ನೋಡಲ್ ಅಧಿಕಾರಿಗಳು, ಯುವ ರೆಡ್ ಕ್ರಾಸ್ ಘಟಕ, ಕ.ವಿ.ವಿ. ಧಾರವಾಡ ಇವರ ಪತ್ರ ಸಂ. KU / PG / YRCW / 2025-26 / 208, ದಿನಾಂಕ: 08.07.2025

೪. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24-09-2025

--------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ 2 ರ ಸಹಾಯಕ ಕಾರ್ಯದರ್ಶಿಗಳು, ಯುವ ರೆಡ್ ಕ್ರಾಸ್ ಸಂಸ್ಥೆ, ಬೆಂಗಳೂರು ಇವರ ಹಾಗೂ ಉಲ್ಲೇಖ 3 ರ ನೋಡಲ್ ಅಧಿಕಾರಿಗಳು, ಯುವ ರೆಡ್ ಕ್ರಾಸ್ ಘಟಕ, ಕ.ವಿ.ವಿ, ಧಾರವಾಡ ಇವರು ಎಲ್ಲಾ ಪದವಿ ಮಹಾವಿದ್ಯಾಲಯಗಳಲ್ಲಿ ಯುವ ರೆಡ್ ಕ್ರಾಸ್ ಘಟಕ ಸ್ಥಾಪಿಸಲು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮನವಿ ಪತ್ರಗಳನ್ನು ಲಗತ್ತಿಸಲಾಗಿದ್ದು, ಸದರ ಉಲ್ಲೇಖ 1 ಹಾಗೂ 2ರ ಮನವಿ ಪತ್ರಗಳಲ್ಲಿಯ ಯುವ ರೆಡ್ ಕ್ರಾಸ್ ಘಟಕ ಸ್ಥಾಪಿಸುವ ಕುರಿತಂತೆ ವಿವರವಾಗಿ ತಿಳಿಸಿದ ಅಂಶಗಳಂತೆ ಮತ್ತು ಅದರೊಂದಿಗೆ ಲಗತ್ತಿಸಿದ ಕರ್ನಾಟಕ ಸರ್ಕಾರದ ನಡುವಳಿಗಳಲ್ಲಿ ಮತ್ತು ಅದಕ್ಕೆ ಲಗತ್ತಿಸಿದ ಉಲ್ಲೇಖ-೧ರ ಯುವ ರೆಡ್ ಕ್ರಾಸ್ ಘಟಕ ಸ್ಥಾಪಿಸುವ ಕುರಿತಂತೆ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, (ಸಾಮಾನ್ಯ-೨) ಇವರ ಸರ್ಕಾರಿ ಅದೇಶ ಸಂಖ್ಯೆ. ಇಡಿ ೩೮ ವಿವಿಧ ೨೦೧೬, ಬೆಂಗಳೂರು, ದಿನಾಂಕ: 17.06.2016 ರಲ್ಲಿ ತಿಳಿಸಿದಂತೆ ಅನುಸೂಚಿ – ಎ ಮತ್ತು ಬಿ ರಲ್ಲಿ ನಿಯಮಿಸಲಾಗಿರುವ ಆಡಳಿತ, ಕಾರ್ಯನೀತಿ ಮತ್ತು ಆರ್ಥಿಕ ನಿರ್ದೇಶನಗಳನ್ನು ಹಾಗೂ ಕಾರ್ಯಕ್ರಮ/ಕ್ರಮವಿಧಿ ಮಾರ್ಗಸೂಚಿಗಳಿಗೆ ಬದ್ಧರಾಗಿ ಅವುಗಳನ್ನು ಚಾಚೂತಪ್ಪದೇ ಪರಿಪಾಲಿಸಲು ಎಲ್ಲಾ ಸರ್ಕಾರಿ, ಪ್ರಥಮ ದರ್ಜೆ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳಿಗೆ ಆದೇಶಿಸಿದಂತೆ 2025-26ನೇ ಸಾಲಿನಿಂದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಪದವಿ ಮಹಾವಿದ್ಯಾಲಯಗಳಲ್ಲಿ ಯುವ ರೆಡ್ ಕ್ರಾಸ್ ಘಟಕ ಸ್ಥಾಪಿಸಿ, ಸರ್ಕಾರದ ಆದೇಶದಂತೆ ಕ.ವಿ.ವಿ. ವ್ಯಾಪ್ತಿಯಲ್ಲಿ ಒಳಪಡುವ ಮಹಾವಿದ್ಯಾಲಯದ ಎಲ್ಲ ಪ್ರಾಚಾರ್ಯರುಗಳು ತ್ವರಿತವಾಗಿ ತಮ್ಮ ಕಾಲೇಜುಗಳಲ್ಲಿ ಉಸ್ತುವಾರಿ ನೋಡಿಕೊಳ್ಳಲು ಒಬ್ಬ ಪ್ರಾಧ್ಯಾಪಕರನ್ನು ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮದ ಅಧಿಕಾರಿಯಾಗಿ ನೇಮಿಸಿಕೊಂಡು ಅವರುಗಳ ಹೆಸರು ವಿಳಾಸ ಹಾಗೂ ಮೊಬೈಲ್ ಸಂಖ್ಯೆಗಳನ್ನು ವಿಶ್ವವಿದ್ಯಾಲಯದ ಯುವ ರೆಡ್ ಕ್ರಾಸ್ ಘಟಕದ ಸಮನ್ವಯ ಅಧಿಕಾರಿಯಾದ ಡಾ. ಎಸ್.ಜಿ.ಚಲವಾದಿ, ಪ್ರಾಧ್ಯಾಪಕರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ, ಅಧ್ಯಯನ ವಿಭಾಗ, ಕ.ವಿ.ವಿ. ಧಾರವಾಡ (ಮೊಬೈಲ್ ಸಂಖ್ಯೆ 8970276353) ಇವರಿಗೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲು ಹಾಗೂ ಮೇಲ್ಕಾಣಿಸಿದ ಉಲ್ಲೇಖಗಳ ಪತ್ರಗಳ/ಆದೇಶಗಳಂತೆ ಚಾಚುತಪ್ಪದೇ ಮುಂದಿನ ಕ್ರಮ ವಹಿಸಲು ಎಲ್ಲ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು

ಅಡಕ:ಮೇಲಿನಂತೆ

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

ಪು.ತಿ.ನೋ.

**ಪ್ರತಿ:**

1. ನೋಡಲ್ ಅಧಿಕಾರಿಗಳು, UUCMS ಘಟಕ ಕ.ವಿ.ವಿ. ಧಾರವಾಡ.
2. ಡಾ. ಎಸ್.ಜಿ.ಚಲವಾದಿ, ನೋಡಲ್ ಅಧಿಕಾರಿಗಳು ಯುವ ರೆಡ್ ಕ್ರಾಸ್ ಘಟಕದ ಕ.ವಿ.ವಿ ಮತ್ತು ಪ್ರಾಧ್ಯಾಪಕರು ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ, ಅಧ್ಯಯನ ವಿಭಾಗ, ಕ.ವಿ.ವಿ. ಧಾರವಾಡ.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ (CDC) / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
7. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
8. ನಿರ್ದೇಶಕರು, ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ UUCMS Admission Portal (ಅಂತರ್ಜಾಲ) https://uucmskarnataka.gov.in ವನ್ನು ಕ.ವಿ.ವಿ. ಅಂತರ್ಜಾಲದ ಮುಖಪುಟದಲ್ಲಿ ತಕ್ಷಣ ಅಳವಡಿಸುವುದು.

# Karnatak University, Dharwad

NAAC Accredited with " A" Grade-2022

*THROUGH HUMANITY TO PEACE*

# YOUTH RED CROSS WING

**Dr. S.G. Chalawadi**
Nodal Officer
Youth Red Cross Wing, KUD

Professor
Dept. of A.I. History & Epigraphy, KUD
Mob : 8970276353
e-mail : drsgchalawad@gmail.com


No. KU/PG/YRCW/2025-26/208 Date: 08/07/25

KARNATAK UNIVERSITY DHARWAD-3
08 JUL 2025
Inward No. 644

Registrar Se[illegible]at
No: A 890 Date: 9 JUL 2025

ಗೆ

ಮಾನ್ಯ ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

ವಿಷಯ: ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪದವಿ ಕಾಲೇಜುಗಳು ಮತ್ತು ವಿದ್ಯಾರ್ಥಿಗಳು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸದಸ್ಯತ್ವ ಪಡೆಯಲು ಫೀಸ್ ಸ್ಟಕ್ಚರ್‌ನ ಆದೇಶದಲ್ಲಿ ನಮೂದಿಸುವ ಬಗ್ಗೆ.

ಉಲ್ಲೇಖ:1.ಸರ್ಕಾರಿ ಆದೇಶ ಸಂಖ್ಯೆ: **ED/64/Vividha/2011, dated: 22/12/2011**

2.ಸರ್ಕಾರಿ ಆದೇಶ ಸಂಖ್ಯೆ: **ED 38 Vividha 2016, dated: 17/06/2016**

3.ಕಾಲೇಜು ಶಿಕ್ಷಣ ಆಯುಕ್ತರು ಕಛೇರಿಯ ಸುತ್ತೋಲೆ ಸಂಖ್ಯೆ–
**ಕಾಶಿಇ/ಶೈವಿ/03/ಸುತ್ತೋಲೆ/2024–25, ದಿನಾಂಕ 11–06–2024**

SL
9-7-25

ಮಾನ್ಯರೆ,

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ ತಮ್ಮ ಅವಗಾಹನೆಗೆ ಸಲ್ಲಿಸುವುದೇನೆಂದರೆ, ಉಲ್ಲೇಖ 1 ಹಾಗೂ 2 ರ ಸರ್ಕಾರದ ಆದೇಶ ಹಾಗೂ 3 ರಂತೆ ಆಯುಕ್ತರು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಸುತ್ತೋಲೆಯಂತೆ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸದಸ್ಯತ್ವ ಪಡೆದು ಕಾಲೇಜುಗಳಲ್ಲಿ ಯುವ ರೆಡ್ ಕ್ರಾಸ್ ಘಟಕ ಪ್ರಾರಂಭಿಸಿ ಪ್ರತಿಯೊಬ್ಬ ವಿದ್ಯಾಥಿಯಿಂದ ಪ್ರತಿ ವರ್ಷ ರೂ.50/– ರಂತೆ ಶುಲ್ಕವನ್ನು ಪಡೆಯಲು ಆದೇಶ ನೀಡಲಾಗಿದೆ.

ಆದ್ದರಿಂದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜುಗಳಿಗೆ 2025–26ನೇ ಶೈಕ್ಷಣಿಕ ಸಾಲಿನ **Fee Structure Notification** ನಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಶುಲ್ಕ ರೂ.50/– ಎಂದು ಕಡ್ಡಾಯವಾಗಿ ನಮೂದು ಮಾಡಲು ತಮ್ಮಲ್ಲಿ ವಿನಂತಿಸಿದೆ.

ACa(S&T)
25/9/7

ಗೌರವಪೂರ್ವಕ ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ
Chalawadi
**Nodal Officer**
**Youth Red Cross Wing**
**Karnatak University**
**Dharwad-580003.**

ಪ್ರತಿಗಳು:

1) ಕುಲಪತಿಗಳ ಆಪ್ತ ಕಾರ್ಯಾಲಯ, ಕ.ವಿ.ವಿ.ಧಾರವಾಡ ಇವರಿಗೆ,

THROUGH HUMANITY TO PEACE

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ

# Indian Red Cross Society

(CONSTITUTED UNDER PARLIAMENT ACT XV OF 1920)

KARNATAKA STATE BRANCH

100 years of minimizing, alleviating and preventing human suffering

Phone : 080-22264205, 22352127

E-mail : ircskar@gmail.com, ircskarnataka@yahoo.in

Website : www.redcrosskarnataka.org

No. IRCS/YRC/SMFS/443-445/25-26

Date : 13/05/2025

Encl :

ಮಾನ್ಯ ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
ಪಾವಟೆ ನಗರ
ಧಾರವಾಡ-580003

ಮಾನ್ಯರೆ,

ವಿಷಯ:- ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪದವಿ ಕಾಲೇಜುಗಳು ಮತ್ತು ವಿದ್ಯಾರ್ಥಿಗಳು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸದಸ್ಯತ್ವ ಪಡೆಯಲು ಫೀಸ್ ಸ್ಟ್ರಕ್ಚರ್‌ನ ಆದೇಶದಲ್ಲಿ ನಮೂದಿಸುವ ಬಗ್ಗೆ.

ಉಲ್ಲೇಖ:- 1. ಸರ್ಕಾರಿ ಆದೇಶ ಸಂಖ್ಯೆ- **ED/64/Vividha/2011, dated: 22/12/2011**

2. ಸರ್ಕಾರಿ ಆದೇಶ ಸಂಖ್ಯೆ:- **ED 38 Vividha 2016, dated: 17/06/2016**

3.ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ಸುತ್ತೋಲೆ ಸಂಖ್ಯೆ – **ಕಾಶಿಇ/ಶೈವಿ/03/ಸುತ್ತೋಲೆ/2024-25, ದಿನಾಂಕ-11-06-2024**

************

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ತಮ್ಮ ಅವಗಾಹನೆಗೆ ಸಲ್ಲಿಸುವುದೇನೆಂದರೆ, ಉಲ್ಲೇಖ 1 ಹಾಗೂ 2ರ ಸರ್ಕಾರದ ಆದೇಶ ಹಾಗೂ 3 ರಂತೆ ಆಯುಕ್ತರು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಸುತ್ತೋಲೆಯಂತೆ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸದಸ್ಯತ್ವ ಪಡೆದು ಕಾಲೇಜುಗಳಲ್ಲಿ ಯುವ ರೆಡ್ ಕ್ರಾಸ್ ಘಟಕ ಪ್ರಾರಂಭಿಸಿ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪ್ರತಿ ವರ್ಷ ರೂ.50/- ರಂತೆ ಶುಲ್ಕವನ್ನು ಪಡೆಯಲು ಆದೇಶ ನೀಡಲಾಗಿದೆ.

ಆದ್ದರಿಂದ ತಮ್ಮ ವಿಶ್ವವಿದ್ಯಾಲಯದ 2025-26ನೇ ಶೈಕ್ಷಣಿಕ ಸಾಲಿನ Fee Structure Notification ನಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಶುಲ್ಕ ರೂ.50/- ಎಂದು ಕಡ್ಡಾಯವಾಗಿ ನಮೂದು ಮಾಡಲು ತಮ್ಮಲ್ಲಿ ವಿನಂತಿಸಿದೆ.

ಗೌರವಪೂರ್ವಕ ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಹೆಚ್. ಎಸ್. ಬಾಲಸುಬ್ರಮಣ್ಯ
ಪ್ರಧಾನ ಕಾರ್ಯದರ್ಶಿಗಳು

ಪ್ರತಿಯನ್ನು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ:-

1. ಮಾನ್ಯ ಉಪ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯರವರಿಗೆ, ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಡಾ. ಎಸ್.ಜಿ. ಚಲವಾದಿ, ಯುವ ರೆಡ್ ಕ್ರಾಸ್ ನೋಡಲ್ ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

# 26, Red Cross Bhavan, 1st Floor, Race Course Road, Bengaluru - 560 001

THROUGH HUMANITY TO PEACE

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ

# Indian Red Cross Society

(CONSTITUTED UNDER PARLIAMENT ACT XV OF 1920)

KARNATAKA STATE BRANCH

100 years of minimizing, alleviating and preventing human suffering

Phone : 080-22264205, 22352127
E-mail : ircskar@gmail.com, ircskarnataka@yahoo.in
Website : www.redcrosskarnataka.org

No. IRCS / YRC/SMF/576-605/25-26

Date : 28/05/2025

Encl :

ಮಾನ್ಯ ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
ಪಾವಟೆ ನಗರ
ಧಾರವಾಡ-580003

Registrar Secretariat
No: A 596 Date - 6 JUN 2025

ಸನ್ಮಾನ್ಯರಿಗೆ ಮಾಡುವ ನಮಸ್ಕಾರಗಳು,

**ವಿಷಯ:** ಎಲ್ಲಾ ಸರ್ಕಾರಿ ಪ್ರಥಮದರ್ಜೆ, ಅನುದಾನಿತ ಮತ್ತು ಅನುದಾನರಹಿತ ಪದವಿ ಕಾಲೇಜುಗಳಲ್ಲಿ ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ, ವಿದ್ಯಾರ್ಥಿ ಸದಸ್ಯತ್ವ ಶುಲ್ಕ (ಪ್ರತಿ ವಿದ್ಯಾರ್ಥಿಯಿಂದ) ರೂ.15/- ಕಳುಹಿಸುವ ಬಗ್ಗೆ

**ಉಲ್ಲೇಖ:** 1. ಸರ್ಕಾರಿ ಆದೇಶ ಸಂಖ್ಯೆ- **ED/64/Vividha/2011, dated: 2/12/2011 & ED 38 Vividha 2016, dated: 17/06/2016.**

2. **ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ರವರ ಸುತ್ತೋಲೆ ಸಂಖ್ಯೆ:** ಕಾಶಿಇ/ಶೈವಿ/156/ರೆಡ್‌ಕ್ರಾಸ್/2024-25, ದಿನಾಂಕ-21.05.2025

*******************

ಮೇಲ್ಕಂಡ ಉಲ್ಲೇಖ (1) ಸರ್ಕಾರದ ಆದೇಶ ಮತ್ತು ಸುತ್ತೋಲೆಯಲ್ಲಿ ತಿಳಿಸಿರುವಂತೆ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳು ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ **ರೂ.1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ)** ಗಳನ್ನು ಒಂದು ಬಾರಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವಂತೆ ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ಯೂತ್ ರೆಡ್ ಕ್ರಾಸ್ ಘಟಕ ದಡಿಯಲ್ಲಿ ವಾರ್ಷಿಕವಾಗಿ ರೂ.50/- ಗಳನ್ನು ಸಂಗ್ರಹಿಸುವಂತೆಯು ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ 30% (ರೂ.15/-) ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ, ಉಳಿದ 70% (ರೂ.35/-) ಗಳನ್ನು ಕಾಲೇಜಿನ ಯುವ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಆದೇಶಿಸಲಾಗಿದೆ.

ಅದ್ದರಿಂದ ಇಲ್ಲಿಯವರೆವಿಗೂ ರೆಡ್ ಕ್ರಾಸ್ ಸಂಸ್ಥೆಗೆ ನೋಂದಣಿಯಾಗದೆ ಇರುವ ಕಾಲೇಜುಗಳಲ್ಲಿ ಕಡ್ಡಾಯವಾಗಿ ಯೂತ್ ರೆಡ್ ಕ್ರಾಸ್ ಘಟಕ ವನ್ನು ಸ್ಥಾಪಿಸಿ, ಈ ಪತ್ರದೊಂದಿಗೆ ಲಗತ್ತಿಸಿರುವ ನೋಂದಣಿ ಅರ್ಜಿಯಂತೆ ಭರ್ತಿ ಮಾಡಿ ನೋಂದಣಿ ಶುಲ್ಕ ರೂ.1,500/- ಗಳನ್ನು ಡಿಡಿ /ಚೆಕ್ ಮೂಲಕ ಪಾವತಿಸಿ ನೋಂದಾಯಿಸಿಕೊಳ್ಳುವಂತೆ ಹಾಗೂ ಈ ಹಿಂದಿನ ವರ್ಷಗಳಲ್ಲಿ ಅಂದರೆ, 2016-17, 2017-18, 2018-19, 2019-20, 2020-2021, 2021-22, 2022-23, 2023-24, 2024-25 ಶೈಕ್ಷಣಿಕ ವರ್ಷದ ಪ್ರತಿ ವಿದ್ಯಾರ್ಥಿಯಿಂದ 30% (ರೂ.15/-) ಗಳನ್ನು ಭಾರತೀಯ ರೆಡ್ ಕ್ರಾಸ್, ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಪಾವತಿಸುವಂತೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಲು ಈ ಮೂಲಕ ಕೋರಿದೆ.

ಮುಂದುವರೆದು ಸದರಿ ಶುಲ್ಕವನ್ನು ಈ ಕೆಳಕಂಡ ವಿಳಾಸಕ್ಕೆ ಡಿಡಿ/ಚೆಕ್ ಮೂಲಕ ಪಾವತಿಸತಕ್ಕದ್ದು:

| DD/ CHEQUE SHOULD BE IN FAVOUR OF : | POSTAL ADDRESS:- |
| --- | --- |
| INDIAN RED CROSS SOCIETY - YOUTH RED CROSS | #26, RED CROSS BHAVAN,<br>1ST FLOOR, RACE COURSE ROAD, BENGALURU – 560001<br>Email :- yrckar@gmail.com,<br>PH :-080-22264205 |

**ಅಡಕ:** ಸರ್ಕಾರದ ಆದೇಶ, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ರವರ ಸುತ್ತೋಲೆ ಮತ್ತು ನೊಂದಣಿಯ ಅರ್ಜಿಯನ್ನು ತಮ್ಮ ಗಮನಕ್ಕಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಈ ಪತ್ರದೊಂದಿಗೆ ಲಗತ್ತಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಉಮಾಕಾಂತ್
ಸಹಾಯಕ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/156/ರೆಡ್ ಕ್ರಾಸ್/2024-25

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01.
ದಿನಾಂಕ: 21.5.25

## ಸುತ್ತೋಲೆ

ವಿಷಯ: ಯುವ ರೆಡ್ ಕ್ರಾಸ್ ಘಟಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ವಿವಿಧ 2011, ದಿನಾಂಕ:22.12.2011
2. ಈ ಕಛೇರಿಯ ಇದೆ ಕ್ರಮಾಂಕದ ಸುತ್ತೋಲೆ ದಿನಾಂಕ: 11.06.2024
3. ಸರ್ಕಾರದ ಆದೇಶ ಸಂಖ್ಯೆ: ಇಡಿ 38 ವಿವಿಧ 2016, ದಿನಾಂಕ:17.06.2016
4. ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಇವರ ಪತ್ರ ಸಂಖ್ಯೆ IRCS/EST/YRC/50/25-26 ದಿನಾಂಕ: 08.04.2025

*******

ಮೇಲ್ಕಂಡ ಉಲ್ಲೇಖ (1) ಮತ್ತು (3) ರ ಸರ್ಕಾರದ ಆದೇಶಗಳಲ್ಲಿ ಹಾಗೂ ಕಛೇರಿಯ ಸುತ್ತೋಲೆಯಲ್ಲಿ XV ನೇ ಕೇಂದ್ರ ಅಧಿನಿಯಮ -1920ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಬಹುಮುಖ್ಯ ಅಂಗವಾದ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಹಾಗೂ ಈ ಮೂಲಕ ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥತೆ, ಅಪರತಂತ್ರ, ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ನಿಟ್ಟಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ, ನಾಗರೀಕ ಹೊಣೆಗಾರಿಕೆ, ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ.

ಅದರಂತೆ ಈ ಕಛೇರಿ ವ್ಯಾಪ್ತಿಗೆ ಒಳಪಡುವ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳು ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ ರೂ.1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವಂತೆಯು ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ಯೂತ್ ರೆಡ್ ಕ್ರಾಸ್ ಘಟಕ ದಡಿಯಲ್ಲಿ ವಾರ್ಷಿಕವಾಗಿ ರೂ.50/- ಗಳನ್ನು ಸಂಗ್ರಹಿಸುವಂತೆಯು ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ 30% (ರೂ.15/-) ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ, ಉಳಿದ 70% (ರೂ.35/-) ಗಳನ್ನು ಕಾಲೇಜಿನ ಯುವ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಆದೇಶಿಸಲಾಗಿದೆ.

ಅದ್ದರಿಂದ ಇಲ್ಲಿಯವರೆವಿಗೂ ರೆಡ್ ಕ್ರಾಸ್ ಸಂಸ್ಥೆಗೆ ನೋಂದಣಿಯಾಗದೆ ಇರುವ ಕಾಲೇಜುಗಳಲ್ಲಿ ಕಡ್ಡಾಯವಾಗಿ ಯೂತ್ ರೆಡ್ ಕ್ರಾಸ್ ಘಟಕ ವನ್ನು ಸ್ಥಾಪಿಸಿ ಈ ಕೂಡಲೇ ಸುತ್ತೋಲೆಯೊಂದಿಗೆ ರವಾನಿಸಿರುವ ನೋಂದಣಿ ಅರ್ಜಿಯಂತೆ ಭರ್ತಿ ಮಾಡಿ ನೋಂದಣಿ ಶುಲ್ಕ ರೂ.1500/- ಗಳನ್ನು ಡಿಡಿ /ಚೆಕ್ ಮೂಲಕ ಪಾವತಿಸಿ ನೋಂದಾಯಿಸಿಕೊಳ್ಳುವಂತೆ ಹಾಗೂ ಈ ಹಿಂದಿನ ವರ್ಷಗಳಲ್ಲಿ ಅಂದರೆ, 2016-17, 2017-18, 2018-19, 2019-20, 2021-21, 2021-22, 2023-24, 2024-25 ಶೈಕ್ಷಣಿಕ ವರ್ಷದ ಪ್ರತಿ ವಿದ್ಯಾರ್ಥಿಯಿಂದ 30% (ರೂ.15/-) ಗಳನ್ನು ಭಾರತೀಯ ರೆಡ್ ಕ್ರಾಸ್, ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಕೂಡಲೇ ಪಾವತಿಸುವಂತೆ ಸೂಚಿಸಲಾಗಿದೆ.

ಮುಂದುವರೆದು, ಸದರಿ ಶುಲ್ಕವನ್ನು ಈ ಕೆಳಕಂಡ ವಿಳಾಸಕ್ಕೆ, ಡಿಡಿ/ಚೆಕ್ ಮೂಲಕ ಪಾವತಿಸತಕ್ಕದ್ದು. ವಿಳಾಸದ ವಿವರ ಈ ಕೆಳಕಂಡಂತಿದೆ.

| | |
|---|---|
| DD/ CHEQUE SHOULD BE IN FAVOUR OF INDIAN RED CROSS SOCIETY-YOUTH RED CROSS<br>Email :- yrckar@gmail.com,<br>PH :-080-22264205 | POSTAL ADDRESS: -<br>General Secretary<br>Indian Red Cross Society, Karnataka State Branch<br>#26, RED CROSS BHAVAN, 1ST FLOOR, RACE COURSE ROAD, BENGALURU - 560001 |

ಮುಂದುವರೆದು ಯುವ ರೆಡ್ ಕ್ರಾಸ್ ಘಟಕಗಳಿಗೆ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಮೊತ್ತದ 70% (ರೂ.35/-) ನ್ನು ಕಾಲೇಜಿನಲ್ಲಿ ನಡೆಸುವ ರೆಡ್ ಕ್ರಾಸ್ ಘಟಕಗಳ ಚಟುವಟಿಕೆಗಳಿಗೆ ಮಾತ್ರ ಬಳಸಿಕೊಳ್ಳತಕ್ಕದ್ದು ಹಾಗೂ ಆಯಾ ಕಾಲೇಜುಗಳಲ್ಲಿ ನಡೆಸಲಾಗುವ ಕಾರ್ಯಕ್ರಮಗಳ ಬಗ್ಗೆ ವಾರ್ಷಿಕ ವರದಿಯನ್ನು ಮೇಲೆ ತಿಳಿಸಲಾಗಿರುವ ರೆಡ್ ಕ್ರಾಸ್ ಸಂಸ್ಥೆಯ ವಿಳಾಸಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

2025-26ನೇ ಶೈಕ್ಷಣಿಕ ವರ್ಷದ ಪ್ರತಿ ವಿದ್ಯಾರ್ಥಿಯಿಂದ 30% (ರೂ.15/-) ಗಳನ್ನು ಭಾರತೀಯ ರೆಡ್ ಕ್ರಾಸ್, ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಪ್ರವೇಶಾತಿಯ ಪ್ರಕ್ರಿಯೇ ಮುಗಿದ ತಕ್ಷಣ ಕಡ್ಡಾಯವಾಗಿ ಪಾವತಿಸುವಂತೆ ಸೂಚಿಸಲಾಗಿದೆ.

ಸುತ್ತೋಲೆ ತಲುಪಿಯು ನೋಂದಣಿಯಾಗದೆ ಇದ್ದರೆ ಮುಂದಿನ ಹಾಗೂ ಹೋಗುಗಳಿಗೆ ತಾವೇ ನೇರಾ ಹೊಣೆಗಾರರಾಗಿರುತ್ತೀರಿ ಹಾಗೂ ಅಂತಹ ಕಾಲೇಜುಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ;
1) ಪ್ರಾದೇಶಿಕ ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.-ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:
1.ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ, ನಂ.26, ರೆಡ್ ಕ್ರಾಸ್ ಭವನ, 1ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560001.
2.ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು - ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
3. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಯುವ ರೆಡ್‌ಕ್ರಾಸ್ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ.

ಓದಲಾಗಿದೆ:- ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಐಆರ್‌ಸಿಎಸ್/ಯು.ರೆ.ಕ್ರಾ/ಮನವಿ/4406/2011 ದಿನಾಂಕ:05.12.2011.

ಪ್ರಸ್ತಾವನೆ:-

ಮೇಲೆ ಓದಲಾದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಈ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ಸರ್ಕಾರಕ್ಕೆ ಬರೆದ ಪತ್ರದಲ್ಲಿ - ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯು ಅಂತರರಾಷ್ಟ್ರೀಯ ಮಾನವೀಯ ಸೇವಾ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ಕೇಂದ್ರೀಯ ಕಾಯ್ದೆಯಡಿಯಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಆಕ್ಟ್ 1921ರಡಿಯಲ್ಲಿ ಸ್ಥಾಪನೆಗೊಂಡಿದ್ದು, ಕರ್ನಾಟಕದಲ್ಲಿ ಕೂಡ 1921 ರಿಂದ ಅಸ್ತಿತ್ವದಲ್ಲಿದ್ದು, ಈ ಸಂಸ್ಥೆಯ ಅಧ್ಯಕ್ಷರು ಗೌರವಾನ್ವಿತ ರಾಷ್ಟ್ರಪತಿಗಳಾಗಿದ್ದು ರಾಜ್ಯ ಶಾಖೆಗೆ ಘನವೆತ್ತ ರಾಜ್ಯಪಾಲರು ಅಧ್ಯಕ್ಷರಾಗಿರುತ್ತಾರೆ ಎಂದು ತಿಳಿಸುತ್ತಾ, ಈ ಸಂಸ್ಥೆಯು ಯುದ್ಧ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ, ನೈಸರ್ಗಿಕ ವಿಪತ್ತು, ವಿಕೋಪಗಳು ಸಂಭವಿಸಿದಾಗ ಪರಿಹಾರ ಕಾರ್ಯದಲ್ಲಿ ಹಾಗೂ ಸಾರ್ವಜನಿಕರಿಗೆ ಶುಶ್ರೂಷೆ ಮಾಡುವ ಸೇವಾ ಸಂಸ್ಥೆಯಾಗಿದೆ: ಆರೋಗ್ಯದ ಬಗ್ಗೆ ಅರಿವು ಮತ್ತು ಶಿಕ್ಷಣ, ರಕ್ತನಿಧಿಗಳು, ಅಂಗವಿಕಲರಿಗೆ ಸಾಧನ ಸಲಕರಣೆಗಳ ವಿತರಣೆ, ಪ್ರಥಮ ಚಿಕಿತ್ಸೆ, ಯುದ್ಧ, ಪ್ರಕೃತಿ ವಿಕೋಪಗಳಿಂದಾಗಿ ಚದುರಿಹೋಗಿರುವ ಕುಟುಂಬಗಳ ಸದಸ್ಯರನ್ನು ಪತ್ತೆ ಮಾಡಿ ಒಂದುಗೂಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಈ ಎಲ್ಲ ಮಾನವೀಯತೆಯ ಗುಣಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸುವ ಉದ್ದೇಶದಿಂದ ಪ್ರತಿ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಸ್ಥಾಪಿಸುವುದು ಅತ್ಯವಶ್ಯವಾಗಿರುತ್ತದೆ ಎಂದು ತಿಳಿಸುತ್ತಾ ಇದಕ್ಕೆ ಪೂರಕವಾಗಿ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು (ಪಾಲಿಟೆಕ್ನಿಕ್) ಒಮ್ಮೆ ರೂ.1500/- ಪಾವತಿಸಿ, ಆಯಾ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಪ್ರಾರಂಭಿಸಲು ಹಾಗೂ ಕಾಲೇಜಿನ ಪ್ರವೇಶ ಶುಲ್ಕವನ್ನು ಪಡೆಯುವಾಗ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪ್ರತಿ ವರ್ಷ ರೂ.50/-ರಂತೆ ಶುಲ್ಕವನ್ನು ಪಡೆಯಲು ಹಾಗೆ ಸಂಗ್ರಹಿಸಿದ ಶುಲ್ಕದಲ್ಲಿ ಶೇ.70ರಷ್ಟನ್ನು ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕದಲ್ಲಿ ಉಳಿಸಿಕೊಂಡು ಅದರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದು ಹಾಗೂ ಉಳಿದ ಶೇ.30 ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಕಳುಹಿಸುವಂತೆ ಆದೇಶಿಸಿ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

..2

ಸರ್ಕಾರವು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಇಡಿ 64 ವಿವಿಧ 2011 ಬೆಂಗಳೂರು, ದಿನಾಂಕ: 22.12.2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಕೋರಿಕೆಯಂತೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು (ಪಾಲಿಟೆಕ್ನಿಕ್) ಒಂದು ಬಾರಿ ರೂ.1500/- (ರೂಪಾಯಿ ಒಂದು ಸಾವಿರದ ಐನೂರು) ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಗೆ ಪಾವತಿಸಿ ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಪ್ರಾರಂಭಿಸಲು ಅಗತ್ಯ ಕ್ರಮ ವಹಿಸಲು ಹಾಗೂ ಕಾಲೇಜಿನ ಪ್ರವೇಶ ಶುಲ್ಕವನ್ನು ಪಡೆಯುವಾಗ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪ್ರತಿ ವರ್ಷ ರೂ.50/- (ರೂಪಾಯಿ ಐವತ್ತು) ರಂತೆ ಶುಲ್ಕವನ್ನು ಪಡೆಯಲು ಹಾಗೂ ಸಂಗ್ರಹಿಸಲಾದ ಶುಲ್ಕದಲ್ಲಿ ಶೇ.70ರಷ್ಟನ್ನು ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕದಲ್ಲಿ ಉಳಿಸಿಕೊಂಡು ಅದರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಹಾಗೂ ಉಳಿದ ಶೇ.30ರಷ್ಟನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಕಳುಹಿಸಿಕೊಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

22/12

(ಯು.ಬಿ.ಉಳವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸಾಮಾನ್ಯ-2).

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇವರ ಆಪ್ತ ಕಾರ್ಯದರ್ಶಿಯವರಿಗೆ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯ) (ಕಾಲೇಜು ಶಿಕ್ಷಣ) (ತಾಂತ್ರಿಕ ಶಿಕ್ಷಣ)
4. ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳು.
5. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-01.
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-01.
7. ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ, ನಂ.26, ರೆಡ್‌ಕ್ರಾಸ್ ಭವನ, ಒಂದನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-01.
8. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

15-5

693
2/7/16

YRC
2/7/16

2/7/16

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯುವ ರೆಡ್ ಕ್ರಾಸ್ ಘಟಕಗಳಿಗೆ ಸಂಬಂಧಿಸಿದಂತೆ ಆಡಳಿತ ಹಾಗೂ ಕಾರ್ಯನೀತಿ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಆದೇಶ ಸಂಖ್ಯೆ:ಇಡಿ 64 ವಿವಿಧ 2011, ದಿ:22/12/2011.

2. ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:IRCS/APG/YRC/3750/2015-16, ದಿ:31/03/2016.

3. ಸರ್ಕಾರದ ಆದೇಶ ಸಂಖ್ಯೆ:ಇಡಿ 38 ವಿವಿಧ 2016. ದಿ:06/04/2016.

4. ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರ ಪತ್ರ ಸಂಖ್ಯೆ:VCPS:2016-17/357, ದಿ:20/04/2016.

*****

XV ನೇ ಕೇಂದ್ರ ಅಧಿನಿಯಮ-1920ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಬಹುಮುಖ್ಯ ಅಂಗವಾದ ಯುವ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಉನ್ನತ ಶಿಕ್ಷಣ ಇಲಾಖೆಯ ಆಡಳಿತ ಹಾಗೂ ಶೈಕ್ಷಣಿಕ ನಿಯಂತ್ರಣಕ್ಕೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಿಗೆ ಮೇಲೆ ಕ್ರಮಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ನಿರ್ದೇಶನ ನೀಡಲಾಗಿತ್ತು. ಮುಂದುವರೆದು, ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥನೀತಿ, ಅಪರತಂತ್ರ, ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ದಿಕ್ಕಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ, ನಾಗರೀಕ ಹೊಣೆಗಾರಿಕೆ, ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ ಒಂದು ಬಾರಿಗೆ ರೂ.1,500 ಗಳನ್ನು ಪಾವತಿಸಲು ಹಾಗೂ ಪ್ರವೇಶ ದಾಖಲಾತಿ ವೇಳೆ ಪ್ರತಿ ವಿದ್ಯಾರ್ಥಿಯಿಂದ ರೂ.50/-ಗಳನ್ನು ಶುಲ್ಕವಾಗಿ ಸಂಗ್ರಹಿಸಲು ಸೂಚಿಸಲಾಗಿತ್ತು. ಈ ರೀತಿ ಸಂಗ್ರಹಿಸಲಾಗುವ ಶುಲ್ಕದ ಸದ್ವಿನಿಯೋಗಕ್ಕಾಗಿ ಪೂರ್ವೋಕ್ತ ಆದೇಶದಲ್ಲಿ ಕ್ರಮಪದ್ಧತಿಗಳನ್ನು ನಿಗದಿಪಡಿಸಲಾಗಿತ್ತು.

ಯುವ ರೆಡ್‌ಕ್ರಾಸ್, ಸಂಸ್ಥೆಗಳ ಸ್ಥಾಪನೆ ಮತ್ತು ಉದ್ದೇಶಗಳನ್ನು ಈಡೇರಿಸಲು ಯುವ ರೆಡ್ ಕ್ರಾಸ್ ಘಟಕ ಸರ್ಕಾರದ ಅನುಮೋದನೆ ಹಾಗೂ ಅಧಿಕೃತ ಮಾನ್ಯತೆ ಪಡೆದ ಏಕರೂಪದ ಮಾರ್ಗಸೂಚಿಗಳನ್ನು ರೂಪಿಸುವುದು, ಎಲ್ಲಾ ಕಾಲೇಜುಗಳ ಸ್ಥಿರ ಚಟುವಟಿಕೆಗಳನ್ನು ಮಾಡುವುದು ಮತ್ತು ಕಾಲೇಜುಗಳ ಕಾರ್ಯನಿರ್ವಹಣೆಯಲ್ಲಿ ಹೊಂದಾಣಿಕೆ ತರುವುದು, ರೆಡ್ ಕ್ರಾಸ್ ಸಂಸ್ಥೆ ಭಾವಿಸಿದಂತೆ ಇಂದಿನ ತೀವ್ರ ಹಾಗೂ ತುರ್ತು ಅವಶ್ಯಕತೆಗಳಾಗಿರುತ್ತವೆ. ತತ್ಪರಿಣಾಮವಾಗಿ, ಕಾಲೇಜುಗಳಲ್ಲಿನ ಯುವ ರೆಡ್ ಕ್ರಾಸ್ ಘಟಕಗಳ ಕಾರ್ಯ ಚಟುವಟಿಕೆಗಳಲ್ಲಿ ಏಕಪ್ರಕಾರತೆ, ಋಜುತ್ವ, ಹೊಣೆಗಾರಿಕೆ, ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಗಳನ್ನು ಖಚಿತಪಡಿಸುವ ನಿಟ್ಟಿನಲ್ಲಿ ಎನ್.ಸಿ.ಸಿ., ಎನ್.ಎಸ್.ಎಸ್., ಮತ್ತು ರೋವರ್ಸ್ &

---2

ರೇಂಜರ್ಸ್ ನಂತಹ ಸಂಸ್ಥೆಗಳ ಮೇಲ್ಪಂಕ್ತಿಯನ್ನು ಅನುಸರಿಸಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ಆಡಳಿತ ಕಾರ್ಯನೀತಿ ಹಾಗೂ ಆರ್ಥಿಕ ನಿರ್ದೇಶನಗಳನ್ನು ಮತ್ತು ಕ್ರಮವಿಧಿ/ಕಾರ್ಯಕ್ರಮ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

ಅದರಂತೆ ಪೂರ್ವೋಕ್ತ ಕರಡು ಮಾರ್ಗಸೂಚಿಗಳನ್ನು ಜಾರಿಗೆ ತರುವಂತೆ ಹಾಗೂ ಅವುಗಳನ್ನು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜುಗಳು/ಪಾಲಿಟೆಕ್ನಿಕ್‌ಗಳು ಕಟ್ಟುನಿಟ್ಟಾಗಿ ಅನುಸರಿಸುವ ನಿಟ್ಟಿನಲ್ಲಿ ಕ್ರಮವಹಿಸುವಂತೆ ಕೋರಿ ಮೇಲೆ ಕ್ರ.ಸಂ.02 ರಲ್ಲಿ ಓದಲಾದ ಪತ್ರದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಮಾರ್ಗಸೂಚಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಸಂಬಂಧದಲ್ಲಿ ಸಲಹೆ-ಸೂಚನೆಗಳನ್ನು ನೀಡಲು ಮೇಲೆ ಓದಲಾದ ಕ್ರ.ಸಂ.03ರ ಆದೇಶದನ್ವಯ ಡಾ॥ ಎ.ಹೆಚ್.ರಾಜಾಸಾಬ, ಉಪ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ ಪರಿಣಿತರ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ:19/04/2016ರಂದು ನಡೆದ ಸಭೆಯಲ್ಲಿ ಸುಧೀರ್ಘ ಪರ್ಯಾಲೋಚನೆ ನಡೆಸಿ ಕರಡು ಮಾರ್ಗಸೂಚಿಗಳಲ್ಲಿನ ಪ್ರತಿಯೊಂದು ಅಂಶಗಳನ್ನು ಪರಿಶೀಲಿಸಿದ ತರುವಾಯ ಸದಸ್ಯರುಗಳು ಸೂಚಿಸಿದ ಸೇರ್ಪಡೆ ಮತ್ತು ವಿಲೋಪನೆಗಳನ್ನು ಅಳವಡಿಸಿಕೊಂಡ ಸಮಿತಿಯಿಂದ ಪರಿಷ್ಕೃತ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

ಸಮಿತಿಯ ಅಧ್ಯಕ್ಷರಾದ ಡಾ॥ ಎ.ಹೆಚ್.ರಾಜಾಸಾಬ, ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರು ಮೇಲೆ ಓದಲಾದ ಕ್ರ.ಸಂ.04ರಲ್ಲಿನ ಆದೇಶದನ್ವಯ ಸಲ್ಲಿಸಿದ ಪರಿಷ್ಕೃತ ಮಾರ್ಗಸೂಚಿಗಳನ್ನು ಸಮಗ್ರವಾಗಿ ಪರಾಮರ್ಶಿಸಿದ ತರುವಾಯ ಪರಿಗಣಿಸಿದ ಸರ್ಕಾರವು ಉನ್ನತ ಶಿಕ್ಷಣ ಇಲಾಖೆಯಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಯುವ ರೆಡ್ ಕ್ರಾಸ್ ಘಟಕಗಳ ಕಾರ್ಯಚಟುವಟಿಕೆ/ಕ್ರಮವಿಧಿಗಳನ್ನು ಫಲಪ್ರದವಾಗಿ/ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ದೇಶದಲ್ಲಿಯೇ ಪ್ರಥಮವಾಗಿ ವ್ಯಾಪಕ ಹಾಗೂ ವಿಸ್ತೃತ ಮಾರ್ಗಸೂಚಿಗಳನ್ನು ರೂಪಿಸಲು ಉದ್ದೇಶಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಇಡಿ 38 ವಿವಿಧ 2016, ಬೆಂಗಳೂರು, ದಿನಾಂಕ:17/06/2016</u>

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆಡಳಿತ ಮತ್ತು ಶೈಕ್ಷಣಿಕ ಅಧಿಕಾರ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಯುವ ರೆಡ್ ಕ್ರಾಸ್ ಚಟುವಟಿಕೆಗಳ ಕಾರ್ಯನಿರ್ವಹಣೆಯಲ್ಲಿ ಏಕಪ್ರಕಾರತೆ, ಋಜುತ್ವ, ಹೊಣೆಗಾರಿಕೆ, ವಿಶ್ವಾಸರ್ಹತೆ ಮತ್ತು ಪಾರದರ್ಶಕತೆ ತರಲು ಈ ಆದೇಶದೊಂದಿಗೆ ಅನುಬಂಧಿಸಲಾಗಿರುವ ಅನುಸೂಚಿ-ಎ ಮತ್ತು ಅನುಸೂಚಿ-ಬಿ ರಲ್ಲಿ ನಿಯಮಿಸಲಾಗಿರುವ ಆಡಳಿತ, ಕಾರ್ಯನೀತಿ ಮತ್ತು ಆರ್ಥಿಕ ನಿರ್ದೇಶನಗಳನ್ನು ಹಾಗೂ ಕಾರ್ಯಕ್ರಮ/ಕ್ರಮವಿಧಿ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ.

ಪೂರ್ವೋಕ್ತ ಆಡಳಿತ, ಕಾರ್ಯನೀತಿ ಮತ್ತು ಆರ್ಥಿಕ ನಿರ್ದೇಶನಗಳನ್ನು ಹಾಗೂ ಕಾರ್ಯಕ್ರಮ/ಕ್ರಮವಿಧಿ ಮಾರ್ಗಸೂಚಿಗಳಿಗೆ ಬದ್ಧರಾಗಿ ಅವುಗಳನ್ನು ಚಾಚೂತಪ್ಪದೇ ಪರಿಪಾಲಿಸಲು ಎಲ್ಲಾ ಸರ್ಕಾರಿ, ಅನುದಾನಿತ/ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್/ ಇಂಜನಿಯರಿಂಗ್ ಕಾಲೇಜುಗಳಿಗೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಲ್.ಸುಬ್ರಮಣ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಸಾಮಾನ್ಯ-2)

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4) ಕುಲಪತಿಗಳು/ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು.
5) ಅಧ್ಯಕ್ಷರು, ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳು/ಪಾಲಿಟೆಕ್ನಿಕ್‌ಗಳು-(ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಮೂಲಕ).
8) ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು-(ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆಯ ಮೂಲಕ).
9) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.

# INDIAN RED CROSS SOCIETY

## KARNATAKA STATE BRANCH

## Youth Red Cross Wing

APPLICATION FORM FOR REGISTRATION

| SL NO | PARTICULARS | DETAILS | | |
|---|---|---|---|---|
| 1 | COLLEGE/ UNIVERSITY NAME* | | | |
| 2 | AISHE/ INSTITUTION CODE* | | | |
| 3 | DISTRICT* | | TALUKA* | |
| 4 | COLLEGE ADDRESS* | | | |
| 5 | PIN CODE* | | | |
| 6 | COLLEGE / OFFICE MOBILE NUMBER AND EMAIL ID | MOBILE NUMBER* | | |
| | | EMAIL ID (Block letters)* | | |
| 7 | NAME OF THE PROGRAM OFFICER (EXISITING LECTURER FROM YOUR COLLEGE) | | | |
| 8 | PROGRAM OFFICER | MOBILE NUMBER* | | EMAIL ID (Block letters)* |
| 9 | STUDENTS MEMBERSHIP FEE DETAILS* | TOTAL NUMBER OF STUDENTS AT THE TIME OF ADMISSION | | (Rs.15/- per Student)<br>Rs.15/- X<br>................................ |
| 10 | COLLEGE REGISTRATION FEE* | Rs.1500/-ONETIME PAYMENT (Quote your receipt number if already paid) | | |
| 11 | PAYMENT THROUGH-DD/CHEQUE/ * | DD/ CHEQUE NUMBER: - ________<br>Rs. ________<br>DATE: - ________<br>BANK NAME: - ________ | | |
| 12 | TOTAL AMOUNT IN WORDS* | Rs.________ | | |
| 13 | ACADEMIC YEAR * | | | |

NOTE: - WE ARE ACCEPTING THE PAYMENT ONLY THROUGH CHEQUE/DD

| | |
|---|---|
| DD/ CHEQUE SHOULD BE IN FAVOUR OF INDIAN RED CROSS SOCIETY- YOUTH RED CROSS<br>Email :- yrckar@gmail.com, PH :-080-22264205 | POSTAL ADDRESS: - #26, RED CROSS BHAVAN, 1ST FLOOR, RACE COURSE ROAD, BENGALURU - 560001 |

Place :-

Date:

Head of the Institution
(Seal and Signature)